**ದಿನಾಂಕ: 04-09-2021 ರಂದು ಬೆಳಿಗ್ಗೆ 11-00 ಗಂಟೆಗೆ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ಸಾರ್ವಜನಿಕ ಸೇವಾ ಸಂಕೀರ್ಣ ವಾರ್ಡ್ ನಂ.126 ಮಾರುತಿಮಂದಿರದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದ ಅಧಿಕಾರಿಗಳು:**

1) ಕಂದಾಯ ಅಧಿಕಾರಿ (ಗೋವಿಂದರಾಜನಗರ)
2) ಸಹಾಯಕ ಅಭಿಯಂತರರು, ವಾರ್ಡ್ ನಂ.126
3) ಕಂದಾಯ ಪರಿವೀಕ್ಷಕರು
4) ಬೆಸ್ಕಾಂ ಇಲಾಖೆಯ ಅಧಿಕಾರಿ
5) ತೋಟಗಾರಿಕೆ ಇಲಾಖೆಯ ಪರಿವೀಕ್ಷಕರು
6) ಪಶುಸಂಗೋಪನಾ ಇಲಾಖೆಯ ಪರಿವೀಕ್ಷಕರು
7) ಆರೋಗ್ಯ ಇಲಾಖೆಯ ಕೆಲಸ ನಿರೀಕ್ಷಕರು
8) ಪೋಲೀಸ್ ಇಲಾಖೆಯ ಸಬ್ ಇನ್ಸ್‌ಪೆಕ್ಟರ್
9) ಪಿ.ಎಫ್.ಬಡಾವಣೆ, ಕೆನರಾ ಬ್ಯಾಂಕ್ ಕಾಲೋನಿ, ಎಲ್.ಐ.ಸಿ. ವೆಲ್‌ಫೇರ್ ಅಸೋಸಿಯೇಷನ್‌ನ ಅಧ್ಯಕ್ಷರು

ದಿನಾಂಕ: 04-09-2021 ರಂದು ಬೆಳಿಗ್ಗೆ 11-30 ಗಂಟೆಗೆ ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂದ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

**ಚರ್ಚಿಸಲಾದ ವಿಷಯಗಳ ವಿವರಗಳು:**

1. ವಾರ್ಡ್ ನಂ. 126 ಮಾರುತಿ ಮಂದಿರದ ಕೆಲವು ರಸ್ತೆ ಬದಿಗಳಲ್ಲಿ ಅನಧಿಕೃತವಾಗಿ ವಾಹನಗಳನ್ನು ಪಾರ್ಕಿಂಗ್ ಮಾಡುತ್ತಿದ್ದು, ಇದರಿಂದಾಗಿ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದ್ದು ಕೂಡಲೇ ತೆರವುಗೊಳಿಸಬೇಕೆಂದು ಶ್ರೀ ರಾಮು, ಎಲ್.ಐ.ಸಿ. ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷರವರು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಹಾಜರಿದ್ದ ಟ್ರಾಫಿಕ್ ಪೋಲೀಸ್ ಅಧಿಕಾರಿಯವರು ಕೂಡಲೇ ಕ್ರಮ ವಹಿಸುವುದಾಗಿ ತಿಳಿಸಿದರು.

   ಕ್ರಮ: ಟ್ರಾಫಿಕ್ ಪೋಲೀಸ್ ಠಾಣೆ, ವಿಜಯನಗರ

2. ಅಪಾಯಕಾರಿಯಾಗಿರುವ ಮರದ ಕೊಂಬೆಗಳನ್ನು ತೆರವುಗೊಳಿಸಿರುವುದಿಲ್ಲವೆಂದು ಕೆನರಾ ಬ್ಯಾಂಕ್ ಕಾಲೋನಿ ವೆಲ್‌ಫೇರ್ ಅಸೋಸಿಯೇಷನ್‌ರವರು ಪ್ರಸ್ತಾಪಿಸಿರುತ್ತಾರೆ.

   ಕ್ರಮ: ವಲಯ ಅರಣ್ಯ ಸಂರಕ್ಷಣಾಧಿಕಾರಿ

3. ವಿನಾಯಕ ಬಡಾವಣೆಯ ಕೆಲವೊಂದು ರಸ್ತೆಗಳಲ್ಲಿ ಅಪಾಯಕಾರಿಯಾಗಿ ತೂಗಾಡುತ್ತಿರುವ ಓ.ಎಫ್.ಸಿ ಕೇಬಲ್‌ಗಳನ್ನು ತೆರವುಗೊಳಿಸದೇ ಇರುವುದರಿಂದ ಕೂಡಲೇ ಕ್ರಮ ವಹಿಸುವಂತೆ ತಿಳಿಸಿದರು.

   ಕ್ರಮ: ಸ.ಕಾ.ನಿ.ಅ(ಓ.ಎಫ್.ಸಿ)

4. ಜಿ.ಕೆ.ಡಬ್ಲ್ಯೂ ಬಡಾವಣೆ, 3ನೇ ಅಡ್ಡರಸ್ತೆಯಲ್ಲಿ ಚರಂಡಿ ಸ್ಲಾಬ್ ಇಲ್ಲದಿರುವ ಬಗ್ಗೆ ಶ್ರೀಮತಿ ರೇವತಿರವರು ದೂರು ಸಲ್ಲಿಸಿದ್ದು, ಕೂಡಲೇ ಮುಚ್ಚಿಸಲು ಕ್ರಮ ಕೈಗೊಳ್ಳವುದಾಗಿ ಸಭೆಯಲ್ಲಿ ತಿಳಿಸಲಾಯಿತು.

   ಕ್ರಮ: ಸಹಾಯಕ ಅಭಿಯಂತರರು (ವಾರ್ಡ್ ನಂ.126)

5. ಬೀದಿ ನಾಯಿಗಳ ನಿಯಂತ್ರಣದಲ್ಲಿ ಯಾವುದೇ ಕ್ರಮ ಜರುಗಿಸಿರುವುದಿಲ್ಲವೆಂದು ವಿನಾಯಕ ಬಡಾವಣೆ ವೆಲ್‌ಫೇರ್ ಅಸೋಸಿಯೇಷನ್‌ರವರು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ.

   ಕ್ರಮ: ಪಶುಸಂಗೋಪನಾ ಇಲಾಖೆ

Scanned with CamScanner

6. 3ನೇ ಸ್ಟೇಜ್, 3ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಕೆನರಾ ಬ್ಯಾಂಕ್ ಕಾಲೋನಿ ವೆಲ್‌ಫೇರ್ ಅಸೋಸಿಯೇಷನ್ ರವರು ಸಭೆಯಲ್ಲಿ 3ನೇ ಸ್ಟೇಜ್, 3ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಕೆನರಾ ಬ್ಯಾಂಕ್ ಕಾಲೋನಿಯಲ್ಲಿ ಡೆಬ್ರಿಸ್‌ನ್ನು ಹಾಕಿದ್ದು, ಸದರಿ ಸ್ಥಳದಲ್ಲಿಯೇ ಕಾರ್ ಪಾರ್ಕಿಂಗ್ ಮಾಡಿರುತ್ತಾರೆ. ಆದುದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಕೂಡಲೇ ಕ್ರಮ ವಹಿಸಲು ಸೂಚಿಸುವಂತೆ ಸಭೆಯಲ್ಲಿ ತಿಳಿಸಿರುತ್ತಾರೆ.

ಕ್ರಮ: ಸ.ಕಾ.ನಿ.ಅ(ಚಂದ್ರಬಡಾವಣೆ)

7. ಸ್ವತ್ತಿನ ಸಂಖ್ಯೆ 88 ಮತ್ತು 89, 2ನೇ ಸ್ಟೇಜ್, 2ನೇ ಮುಖ್ಯರಸ್ತೆ, ಕೆನರಾ ಬ್ಯಾಂಕ್ ಕಾಲೋನಿಯ ಖಾಲಿ ನಿವೇಶನದಲ್ಲಿ ಡೆಬ್ರಿಸ್‌ನ್ನು ಹಾಕುತ್ತಿರುವುದರಿಂದ ಅಲ್ಲಿನ ಸಾರ್ವಜನಿಕರಿಗೆ ತೊಂದರೆಯುಂಟಾಗುತ್ತಿರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

ಕ್ರಮ: ಆರೋಗ್ಯ ವೈದ್ಯಾಧಿಕಾರಿ(ಗೋ.ನ)/ಸ.ಅ.ವಾರ್ಡ್ ನಂ.126

8. ಕೆನರಾಬ್ಯಾಂಕ್ ಕಾಲೋನಿ, ವಿನಾಯಕ ದೇವಸ್ಥಾನದ ಹತ್ತಿರ ಬಸ್ ಸ್ಟಾಪ್‌ನ್ನು ನಿರ್ಮಿಸಿದ್ದು ಸರಿಯಷ್ಟೆ. ಆದರೆ ಸದರಿ ಬಸ್ ತಂಗು ನಿಲ್ದಾಣವು ನಿಷ್ಪ್ರಯೋಜಕವಾಗಿದ್ದು, ಬಸ್ಸುಗಳು ಆ ಸ್ಥಳದಲ್ಲಿ ನಿಲ್ಲಿಸದೇ ಎಂ.ಇ.ಎಸ್.ಶಾಲೆಯ ಹತ್ತಿರ ನಿಲ್ಲಿಸುತ್ತಿದ್ದು, ವಿನಾಯಕ ದೇವಸ್ಥಾನದ ಹತ್ತಿರ ಇರುವ ಬಸ್ ನಿಲ್ದಾಣವು ಇಳಿಜಾರಿನಲ್ಲಿರುವುದರಿಂದ, ಬಸ್ ಚಾಲಕರು ಎಂ.ಇ.ಎಸ್. ಶಾಲೆಯ ಹತ್ತಿರ ಬಸ್ ಸ್ಟಾಪ್ ಮಾಡುತ್ತಿರುತ್ತಾರೆ. ಸದರಿ ಬಸ್ ನಿಲ್ದಾಣದಲ್ಲಿ ರಾತ್ರಿ ಸಮಯದಲ್ಲಿ ಮೂತ್ರ ವಿಸರ್ಜನೆಗೆ ಉಪಯೋಗಿಸುತ್ತಿದ್ದು, ದೇವಸ್ಥಾನಕ್ಕೆ ಬರುವ ಭಕ್ತಾದಿಗಳಿಗೆ ತೊಂದರೆಯುಂಟಾಗುತ್ತಿರುವುದರಿಂದ, ಈ ಬಸ್ ನಿಲ್ದಾಣವನ್ನು ತೆರವುಗೊಳಿಸಿ, ಬಸ್ ನಿಲ್ದಾಣವನ್ನು ಎಂ.ಇ.ಎಸ್. ಶಾಲೆಯ ಹತ್ತಿರವೇ ಸ್ಥಾಪಿಸಬೇಕೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

ಕ್ರಮ: ಬಿ.ಎಂ.ಟಿ.ಸಿ

9. ಕೆನರಾ ಬ್ಯಾಂಕ್ ಕಾಲೋನಿಯಲ್ಲಿ ಸುಮಾರು 4–5 ವರ್ಷಗಳು ಕಳೆದರೂ ಇದುವರೆವಿಗೂ ರಸ್ತೆಗಳಿಗೆ ಡಾಂಬರೀಕರಣ ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಕ್ರಮ: ಸ.ಕಾ.ನಿ.ಅ(ಚಂ.ಬ)/ಸ.ಅ ವಾರ್ಡ್ ನಂ.126

10. 3ನೇ ಅಡ್ಡರಸ್ತೆ, ಕೆನರಾ ಬ್ಯಾಂಕ್ ಕಾಲೋನಿ, ನಿವೇಶನದ ಸಂಖ್ಯೆ 227 ಮತ್ತು 228ರ ನಡುವಿನಲ್ಲಿ ಒಂದು ಸಿ.ಎ.ಸೈಟ್ ಇದ್ದು, ಇದರಲ್ಲಿ ಒಂದು ಹಳೆಯದಾದ ಇಟ್ಟಿಗೆಯಲ್ಲಿ ಕಟ್ಟಿದ ಶೆಡ್ ಇದ್ದು, ಜೊತೆಗೆ ಈ ನಿವೇಶನದಲ್ಲಿ ಹುಲ್ಲು ಕಡ್ಡಿ ಹಾಗೂ ಮಣ್ಣಿನ ರಾಶಿಯಿಂದ ಆವರಿಸಿದ್ದು, ಶೆಡ್ಡನ್ನು ತೆರವು ಮಾಡಿ, ಸೈಟ್‌ನ್ನು ಸ್ವಚ್ಛಗೊಳಿಸಬೇಕಾಗಿ ಕೆನರಾ ಬ್ಯಾಂಕ್ ಕಾಲೋನಿ ವೆಲ್‌ಫೇರ್ ಅಸೋಸಿಯೇಷನ್‌ರವರು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ.

ಕ್ರಮ: ಸ.ಕಂ.ಅ(ಚಂ.ಬ)/ಕಂ.ಪ ವಾರ್ಡ್ ನಂ.126

ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿ ಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

N. Uma 4/9/2021

ವಾರ್ಡ್ ನೋಡಲ್ ಅಧಿಕಾರಿ

ವಾರ್ಡ್ ನಂ.126 ಮಾರುತಿಮಂದಿರ

Scanned with CamScanner